ವಸ್ತ್ರಗಳ ರಾಣಿ ರೇಷ್ಮೆಯ ಬಗ್ಗೆ ಯಾರಿಗೆ ಗೊತ್ತಿಲ್ಲ! ಅಪರೂಪದ, ಅನುಪಮ, ಸ್ವಾಭಾವಿಕ ಚೆಲುವಿನ ಈ ರಾಜವಸ್ತ್ರಕ್ಕೆ ಇನ್ನಷ್ಟು ಬೆಡಗಿನ ಮೆರಗು ಕೊಡಲು ವಿಧ ವಿಧ ಬಣ್ಣಗಳು, ನೈಸರ್ಗಿಕ ವಿಧಾನಗಳು, ವರ್ಣ ಸಂಯೋಜನೆಗಳು, ವಿನ್ಯಾಸಗಳು, ಕಸೂತಿ ವೈವಿಧ್ಯಗಳು ಚಿನ್ನದ/ಬೆಳ್ಳಿಯ ಜರಿ ಕೆಲಸ ಇತ್ಯಾದಿಗಳನ್ನು ಈಗಾಗಲೇ ಈ ಸಾಮ್ರಾಜ್ಞಿಗೆ ಸಮರ್ಪಿಸಿಯಾಗಿದೆ! ಈ ಅಮೂಲ್ಯ ಬಟ್ಟೆಯನ್ನು ಕಲೆ ನಿರೋಧಕ, ಜಲನಿರೋಧಕವಾಗಿಯೂ ಮಾಡಿಯಾಗಿದೆ! ಇಂತಹ ಇನ್ನೊಂದು ಪ್ರಯತ್ನವೇ ಸುಗಂಧಿತ ರೇಷ್ಮೆ ಸೀರೆ!

ರೇಷ್ಮೆಯಂತೆಯೇ ಸುಗಂಧ ಹಾಗೂ ನಮ್ಮ ಭಾರತೀಯ ಸಂಸ್ಕೃತಿಗೂ ಅವಿನಾಭಾವ ಸಂಬಂಧವಿದೆ. ನಾನಾ ವಿಧವಾದ ಸುಗಂಧಗಳಾದ ಅಗರಬತ್ತಿಗಳು, ಕರ್ಪೂರ, ಧೂಪ... ಬಳಸದ ಯಾವ ದೇವಾಲಯ, ಪೂಜಾಗೃಹಗಳಿವೆ? ನಮ್ಮ ರಾಜ, ಮಹಾರಾಜರು/ನವಾಬರುಗಳಿಗಂತೂ ಸುಗಂಧ ದ್ರವ್ಯಗಳ ಬಗ್ಗೆ ಅತಿ ವ್ಯಾಮೋಹ ಹೊಂದಿದ್ದರು ಎನ್ನುತ್ತದೆ ಇತಿಹಾಸ.

ಪ್ರಖ್ಯಾತ ಸಿಲ್ಕ್ ರೂಟ್‌ನಲ್ಲಿ ಕೂಡ ಈ ಸುಗಂಧ ದ್ರವ್ಯಗಳು ದೇಶದಿಂದ ದೇಶಕ್ಕೆ ವಿನಿಮಯವಾಗುತ್ತಿದ್ದವು. ಭಾರತೀಯ, ಅರೆಬಿಯನ್ ಹಾಗೂ ಪರ್ಷಿಯನ್ ಸುಗಂಧ ದ್ರವ್ಯಗಳಿಗೆ ಆಗ ಅಪಾರ ಬೇಡಿಕೆ ಇತ್ತು. ನಮ್ಮ ಗಂಧದ ಬೀಡಿನ ಮೈಸೂರು ಗಂಧದ ಕಾರ್ಖಾನೆ ಕೂಡ ಅಸ್ತಿತ್ವಕ್ಕೆ ಬಂದದ್ದು ಹೀಗೆಯೇ. ಆದರೆ, ಒಂದು ವ್ಯತ್ಯಾಸವೆಂದರೆ ಮೈಸೂರು ಮಹಾರಾಜರ ಉದ್ದೇಶ ಜನಸಾಮಾನ್ಯರಿಗೆ ಈ ಕಾರ್ಖಾನೆಯ ಮೂಲಕ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವುದಾಗಿತ್ತು. ಮೈಸೂರು ಸ್ಯಾಂಡಲ್, ಮೈಸೂರು ಸಿಲ್ಕ್‌ನಷ್ಟೇ ಪ್ರಖ್ಯಾತ! ಅಷ್ಟೇ ಏಕೆ ಕನ್ನಡ ಭಾಷೆ ಕೂಡ ಸುಗಂಧಮಯ! ಕನ್ನಡ ಕಸ್ತೂರಿಯಲ್ತೆ!

## ಅರೋಮ ಥೆರಪಿ

ಸಾಮಾನ್ಯವಾಗಿ ಸುಗಂಧ ದ್ರವ್ಯಗಳು ವಿಲಾಸದ ಪ್ರತೀಕವಾದರೂ, ಅವುಗಳನ್ನು ಕೇವಲ ಮನೋಲ್ಲಾಸಕ್ಕೆ ಮಾತ್ರವಲ್ಲ, ದೈಹಿಕ ಹಾಗೂ ಮಾನಸಿಕ ಚಿಕಿತ್ಸೆಗಾಗಿಯೂ ಬಳಸುವುದು ನಮ್ಮಲ್ಲಿ ತಲತಲಾಂತರದಿಂದ ವಾಡಿಕೆಯಲ್ಲಿದೆ. ಲ್ಯಾವೆಂಡರ್, ಗುಲಾಬಿ, ಮಿಂಟ್, ತುಳಸಿ, ನಿಂಬೆ, ದಾಲ್ಚಿನ್ನಿ ಇತ್ಯಾದಿ ಸುಗಂಧಗಳು ಅರೋಮ ಥೆರಪಿಯಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುತ್ತವೆ. ಸುಗಂಧಗಳು ಮಾನವನ ದೈಹಿಕ/ಮಾನಸಿಕ ಸ್ಥಿತಿಯನ್ನು ಆರೋಗ್ಯಯುತವಾಗಿ, ಸಕಾರಾತ್ಮಕವಾಗಿ, ಉಲ್ಲಸಿತವಾಗಿಡಲು ನೆರವಾಗುತ್ತವೆ. ಸುತ್ತಮುತ್ತಲ ವಾತಾವರಣವನ್ನೂ ಆಹ್ಲಾದಕರವಾಗಿಡುತ್ತದೆ!

ಇಂತಹದೊಂದು ಪರಿಮಳ ಚಿಕಿತ್ಸೆ ಅರೋಮ ಥೆರಪಿ ಎಂಬ ಹೆಸರಿನಲ್ಲಿ ವಿದೇಶಗಳಲ್ಲೂ ಕೂಡ ಜನಪ್ರಿಯವಾಗಿದೆ. ಸುಗಂಧ ದ್ರವ್ಯಗಳನ್ನು ಸಾಮಾನ್ಯವಾಗಿ ಮೂರು ಭಾಗವಾಗಿ ವಿಂಗಡಿಸಬಹುದು, ಮೊದಲನೆಯದಾಗಿ ಸಸ್ಯಜನ್ಯ ಸುಗಂಧಗಳು ಅಂದರೆ, ವಿವಿಧ ಹೂವುಗಳು, ಎಲೆಗಳು, ಹಣ್ಣುಗಳು, ನಾರು, ಬೇರು, ಹುಲ್ಲುಗಳು ಇತ್ಯಾದಿಗಳಿಂದ ತಯಾರಿಸಿದ ಸುಗಂಧಗಳು. ಎರಡನೆಯದಾಗಿ ಪ್ರಾಣಿ ಜನ್ಯ ಅಂದರೆ ಕಸ್ತೂರಿಮೃಗ, ಪುನಗಿನ ಬೆಕ್ಕು, ಕ್ಯಾಂಥರ್ಡಿನ್ ಹುಳುಗಳು ಇತ್ಯಾದಿಗಳಿಂದ ತಯಾರಿಸಿದ ಸುಗಂಧ ದ್ರವ್ಯಗಳು, ಮೂರನೆಯದಾಗಿ ಮಾನವ ನಿರ್ಮಿತ ಕೃತಕ ಸುಗಂಧ ದ್ರವ್ಯಗಳು, ಇವುಗಳು ರಾಸಾಯನಿಕ ಮೂಲವನ್ನು ಹೊಂದಿದ್ದು ವಿವಿಧ ಫ್ಲೇವರ್‌ಗಳಲ್ಲಿ ದೊರಕುತ್ತವೆ. ಬಹಳಷ್ಟು ಸುಗಂಧದ್ರವ್ಯಗಳು ಮಾರುಕಟ್ಟೆಗಳಲ್ಲಿ ದೊರೆಯುವ ಅಗ್ಗದ ಸುಗಂಧಗಳು ಈ ಗುಂಪಿಗೆ ಸೇರುತ್ತವೆ. ಇವುಗಳ ಬೆಲೆಯೂ ಕಡಿಮೆ. ನೈಸರ್ಗಿಕ ಸುಗಂಧಗಳಿಗೆ ಬೆಲೆ ಹೆಚ್ಚು. 10 ಮಿ.ಲಿಗೆ ಲಕ್ಷಾಂತರ ರೂಪಾಯಿ ಬೆಲೆಬಾಳುವ ಸುಗಂಧಗಳೂ ಲಭ್ಯ. ವಿವಿಧ ಸುಗಂಧ ದ್ರವ್ಯಗಳು, ಚೂರ್ಣಗಳು, ದೇಶ ವಿದೇಶಗಳ ಅತ್ತರುಗಳು, ಫ್ರೆಂಚ್ ಪರ್ಫ್ಯೂಮ್‌ಗಳು ಇವುಗಳದೇ ಒಂದು ಸಾಮ್ರಾಜ್ಯ!



## ಆಹಾ ಘಮಘಮ ಸೀರೆ!

ಸುಗಂಧಿತ ರೇಷ್ಮೆವಸ್ತ್ರ ನಮ್ಮ ದೇಶದಲ್ಲಿ ಹೊಸದೇನೂ ಅಲ್ಲ! ಈ ಕುರಿತಾಗಿ ನಮ್ಮ ಕನ್ನಡ/ ಪ್ರಾಚೀನ ಸಾಹಿತ್ಯದಲ್ಲಿ ಅನೇಕ ಉಲ್ಲೇಖಗಳಿವೆ. ನವಿರಾದ ರೇಷ್ಮೆಗೆ ಕಾಶ್ಮೀರದ ಕೇಸರಿಯಿಂದ ಬಣ್ಣ ಹಾಕಿ ಹೊನ್ನ ವರ್ಣದ ದುಕೂಲಗಳನ್ನು ತಯಾರಿಸುವುದು ನಮ್ಮವರಿಗೆ ಕರತಲಾಮಲಕವಾಗಿತ್ತು. ಮದುವೆಯಂತಹ ಸಮಾರಂಭ, ಪಾರ್ಟಿ, ಆಫೀಸಿಗೆ ಹೋಗುವಾಗ ಸಾಮಾನ್ಯವಾಗಿ ಸುಗಂಧಗಳನ್ನು ಬಳಸುತ್ತಾರೆ. ಈ ಸುಗಂಧಗಳನ್ನು ಬಟ್ಟೆಗಳ ಮೇಲೆ, ದೇಹದ ಮೇಲೆ ಸಿಂಪಡಿಸಿಕೊಳ್ಳುತ್ತಾರೆ. ಅನೇಕ ಸಾರಿ ಈ ಸುಗಂಧ ಸಿಂಪರಣೆ ಒಂದು ರೇಜಿಗೆಯ ಕೆಲಸ. ಕೆಲ ಸಲ, ಈ ಸಿಂಪರಣೆಯಿಂದ ಅಮೂಲ್ಯ ವಸ್ತ್ರಗಳು ಕಲೆಯಾಗುವ ಸಂದರ್ಭಗಳೂ ಉಂಟು! ಅಲ್ಮೆರಾದಲ್ಲಿ ಬಟ್ಟೆಗಳ ನಡುವೆ ಸುಗಂಧಗಳ ಸ್ಯಾಚೆಟ್ಟುಗಳನ್ನಿಡುವುದು, ಕಾಟನ್ ಬಾಲ್‌ಗಳ ಮೇಲೆ ಸುಗಂಧ ಚಿಮುಕಿಸಿ ಬಟ್ಟೆಯಲ್ಲಿಟ್ಟುಕೊಳ್ಳುವುದು ಅಂಥ ಪರಿಣಾಮಕಾರಿ ವಿಧಾನಗಳಲ್ಲ, ಇಂಥ ಸಮಸ್ಯೆಗಳಿಗೆ ಉತ್ತರವೆಂಬಂತೆ ಸುಗಂಧಭರಿತ ರೆಡಿಮೇಡ್ ರೇಷ್ಮೆ ವಸ್ತ್ರಗಳನ್ನೇ ಸೃಷ್ಟಿಸಿದರೆ?

ಹೌದು! ಅಂಥದೊಂದು ಕಲ್ಪನೆ ಈಗ ಸಾಕಾರವಾಗಿದೆ! ಕೇಂದ್ರ ರೇಷ್ಮೆ ಮಂಡಳಿಯ ಕೇಂದ್ರ ರೇಷ್ಮೆ ತಾಂತ್ರಿಕ ಸಂಶೋಧನಾ ಸಂಸ್ಥೆಯಲ್ಲಿ ಇಂಥ ಸುಗಂಧಿತ ವಸ್ತ್ರಗಳ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ ವಾಣೀಜ್ಯೀಕರಣಗೊಳಿಸಲಾಗಿದೆ.

ನಮಗೆ ಬೇಕಾದ ಸುಗಂಧವನ್ನು ರೇಷ್ಮೆವಸ್ತ್ರದಲ್ಲಿ ಅಡಗಿಸಿಡಲು ಮೈಕ್ರೊ ಕ್ಯಾಪ್ಸೂಲ್‌ಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ, ಇಂಥ ಮೈಕ್ರೊ ಕ್ಯಾಪ್ಸೂಲ್‌ಗಳಲ್ಲಿ ನಮಗೆ ಬೇಕಾಗುವ ಸುಗಂಧ ಅಡಕವಾಗಿರುತ್ತದೆ. ಉದಾಹರಣೆಗೆ, ನಮಗೆ ಗುಲಾಬಿ ಅಥವಾ ಲ್ಯಾವೆಂಡರ್ ಪರಿಮಳದ ಬಟ್ಟೆ ಬೇಕೆಂದರೆ ರೋಸ್ ಅಥವಾ ಲ್ಯಾವೆಂಡರ್ ಮೈಕ್ರೊ ಕ್ಯಾಪ್ಸೂಲ್‌ಗಳನ್ನು ಆಯ್ದುಕೊಳ್ಳಬೇಕು. ನಂತರ ನೀರಿನಲ್ಲಿ ಸೂಕ್ತವಾದ ಪ್ರಮಾಣದಲ್ಲಿ ಈ ಮೈಕ್ರೊ ಕ್ಯಾಪ್ಸೂಲುಗಳ ಪೌಡರನ್ನು ಕದಡಿ ಇದರ ಜೊತೆಗೆ ಬೈಂಡರ್‌ಗಳನ್ನು ಬೆರೆಸಬೇಕು. ರೇಷ್ಮೆ ಬಟ್ಟೆಯನ್ನು ಈ ದ್ರಾವಣದಲ್ಲಿ ನಿರ್ಧರಿತ ಸಮಯದವರೆಗೆ ನೆನೆಯಲು ಬಿಟ್ಟು ನಂತರ ಪ್ಯಾಡಿಂಗ್‌ಗಾಗಿ (ತಟ್ಟಲು) ಕಳುಹಿಸಲಾಗುತ್ತದೆ.

ರೋಲರ್‌ಗಳ ಮಧ್ಯೆ ಸರಿಯಾದ ಒತ್ತಡದಿಂದ ಬೈಂಡರ್‌ಗಳ ಮೂಲಕ ಈ ಸುಗಂಧ ಬಟ್ಟೆಗೆ ಸಮನಾಗಿ ಅಂಟಿಕೊಳ್ಳುತ್ತದೆ. ಪ್ಯಾಡಿಂಗ್‌ನಿಂದ ಬಂದ ಈ ಬಟ್ಟೆಯನ್ನು ಒಣಗಿಸಿ, ಸಂಸ್ಕರಿಸಿ ನಂತರ ಪ್ಯಾಕ್ ಮಾಡಿ ಮಾರುಕಟ್ಟೆಗೆ ಕಳುಹಿಸಲಾಗುತ್ತದೆ. ಇಂತಹ ಒಂದು ಸುಗಂಧಿತ ಸಿಲ್ಕ್ ಸೀರೆಯನ್ನು ಉಟ್ಟು ಸಂಭ್ರಮದಲ್ಲಿ ಸರ ಭರ ನಡೆಯುವಾಗ ಸೀರೆಯ ನೆರಿಗೆಗಳ ಘರ್ಷಣೆಗೆ ಮೈಗೂ ಹಾಗೂ ಬಟ್ಟೆಯ ಮಧ್ಯೆ ನವಿರಾದ ಉಜ್ಜಾಟದಿಂದ ಬಟ್ಟೆಯಲ್ಲಿರುವ ಸುಗಂಧಿತಕೋಶಗಳು (ಮೈಕ್ರೊ ಕ್ಯಾಪ್ಸೂಲ್) ಒಡೆದು ಸುಗಂಧ ಹೊರಸೂಸುತ್ತದೆ, ವಾತಾವರಣವೆಲ್ಲಾ ಆಹ್ಲಾದಕರವಾತ್ತದೆ. ಸುಂದರ ಸುಕೇಶಿನಿ, ಸುಹಾಸಿನಿ ಇದರಿಂದಾಗಿ ಸುವಾಸಿನಿಯೂ ಆಗುತ್ತಾಳೆ! ಇಂಥ ಸುಗಂಧಿತ ರೇಷ್ಮೆ ಸೀರೆಗಳು ಸುಮಾರು 18–20 ಒಗೆತಗಳನ್ನು ತಾಳುತ್ತವೆ.

ಅಂದರೆ, ಅಷ್ಟು ಸಲ ಒಗೆದರೂ ಸುಗಂಧವನ್ನು ಸೂಸುತ್ತಲೇ ಇರುತ್ತವೆ! ಈಗಾಗಲೇ, ಅನೇಕ ದೇಶಗಳಲ್ಲಿ ಕೆಲ ಪ್ರಖ್ಯಾತ ಟೆಕ್ಸ್‌ಟೈಲ್ಸ್ ಕಂಪನಿಗಳು ಸುಗಂಧಿತ ಒಳ ಉಡುಪುಗಳನ್ನು ಮಾರುಕಟ್ಟೆಗೆ ಬಿಟ್ಟಿವೆ. ಈ ಒಳ ಉಡುಪುಗಳಲ್ಲಿರುವ ಇಲ್ಯಾಸ್ಟಿಕ್‌ಗಳನ್ನು ಹಿಗ್ಗಿಸಿದಾಗ ಅಲ್ಲಿರುವ ಸುಗಂಧ ಕೋಶಗಳು ಒಡೆದು ನವಿರಾದ ಸುಗಂಧ ಹೊರ ಹೊಮ್ಮುತ್ತದೆ.

ಇಂಥ ಸುಗಂಧಿತ ಸಿಲ್ಕ್ ಸೀರೆಯನ್ನುಟ್ಟ ಚಂದನದ ಚೆಲುವೆಯನ್ನು ನೋಡಿ ಕಣ್‌ಕಣ್ ಬಿಡುವುದಷ್ಟೆಯಲ್ಲ, ನಮ್ಮ ನೀಳ ನಾಸಿಕವನ್ನೂ ಎಗ್ಗಿಲ್ಲದೆ ಅರಳಿಸಿ, ವಾತಾವರಣದಲ್ಲಿ ಹೊರಸೂಸುವ ಸುವಾಸನೆಯನ್ನು ಆಘ್ರಾಣಿಸುವ ಕಾಲ ಇದೀಗ ಸನ್ನಿಹಿತವಾಗಿದೆ. ■